# ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ

(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು–560001

ದೂರವಾಣಿ ಸಂ: 080–29565353 | Email: splocaima21@gmail.com

ಸಂ:SPLOCA/ADM/30/2024-25 ದಿನಾಂಕ:28.04.2026

## ಪ್ರಕಟಣೆ

**ವಿಷಯ: ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ರವರ ಕಛೇರಿಗೆ ಗುತ್ತಿಗೆ ಆಧಾರದ ಮೇರೆಗೆ ಮಾನವ ಸಂಪನ್ಮೂಲ ಸೇವೆ ಪಡೆಯಲು ಅರ್ಜಿಗಳನ್ನು/ಪ್ರಸ್ತಾವನೆಗಳನ್ನು ಆಹ್ವಾನಿಸುತ್ತಿರುವ ಬಗ್ಗೆ.**

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ರವರ ಕಛೇರಿಗೆ ಈ ಕೆಳಕಂಡ ವಿವಿಧ ಹುದ್ದೆಯನ್ನು ಗುತ್ತಿಗೆ ಆಧಾರದ ಮೇರೆಗೆ ಭರ್ತಿಮಾಡಿಕೊಳ್ಳಲು ಆಸಕ್ತ ವೈಯಕ್ತಿಕ ವ್ಯಕ್ತಿಗಳಿಂದ Resume ಅನ್ನು ಆಹ್ವಾನಿಸಲಾಗಿದ್ದು, ಸದರಿ ಪ್ರಸ್ತಾವನೆಯನ್ನು ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ರವರ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದೆ.

**ಹುದ್ದೆಯ ವಿವರ** **ಪ್ರಸ್ತಾವನೆ ಸಲ್ಲಿಸುವ ಕೊನೆಯ ದಿನಾಂಕ:09.05.2026**

**ಹುದ್ದೆ/ಹುದ್ದೆಯ ಹೆಸರು: ಲೆಕ್ಕಾಧೀಕ್ಷಕರು, ಹುದ್ದೆಗಳ ಸಂಖ್ಯೆ:1, ಗರಿಷ್ಠ ಮಾಸಿಕ ಗುತ್ತಿಗೆ ವೇತನ (ವಾಸ್ತವಿಕ ವೇತನವು ಅರ್ಹತೆ ಮತ್ತು ಅನುಭವದ ಮೇಲೆ ಅವಲಂಬಿತವಾಗಿರುತ್ತದೆ): ರೂ.55,000/– ರಿಂದ ರೂ.60,000/–, ಅರ್ಹತೆ: ಹೆಸರಾಂತ ಸಂಸ್ಥೆ/ಸರ್ಕಾರಿ ಸಂಸ್ಥೆಯಲ್ಲಿ ಸಮಾನ ಹುದ್ದೆಯಲ್ಲಿ ಕನಿಷ್ಠ 10 ವರ್ಷಗಳ ಲೆಕ್ಕಪತ್ರ ಅನುಭವ ಹೊಂದಿರುವ M.Com. ಅಭ್ಯರ್ಥಿಗೆ Single entry Accounting ಕುರಿತು ಉತ್ತಮ ಜ್ಞಾನ ಮತ್ತು ಪರಿಚಯ ಇರಬೇಕು.**

ಈ ಹುದ್ದೆಯನ್ನು ಸರ್ಕಾರದ ಆದೇಶದ ಮೂಲಕ ಸೃಷ್ಟಿಸಲಾಗಿದೆ ಮತ್ತು ಇದು ಪ್ರತಿವರ್ಷ ನವೀಕರಿಸಬಹುದಾದದ್ದು. ಇದು ಒಪ್ಪಂದ ಆಧಾರಿತ ಹುದ್ದೆಯಾಗಿದ್ದು, ತೃಪ್ತಿಕರ ಕಾರ್ಯಕ್ಷಮತೆಯ ಆಧಾರದ ಮೇಲೆ ಪ್ರತಿ ವರ್ಷ ನವೀಕರಿಸಲಾಗುತ್ತದೆ. ವೇತನದಲ್ಲಿ ಕಾಲಾನುಗುಣವಾಗಿ ಹೆಚ್ಚಳ ಮಾಡಲಾಗುತ್ತದೆ, ಆದರೆ ಇದು ಶಾಶ್ವತ ಸರ್ಕಾರಿ ಸೇವೆಯಲ್ಲ.

ಸಹಿ/–

ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು,

ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು, ಬೆಂಗಳೂರು

ಡಿಐಪಿಆರ್/ಸಿಪಿ/410/ಸಿಸಿಎಲ್/2026–27